# ವೈವಸ್‌ನಿಂದ ಹೃದಯ ಚಿಕಿತ್ಸೆ

ಮಂಡ್ಯ, ಮೇ 16- ವೈವಸ್ ಗ್ರೂಪ್‌ನಿಂದ ಗ್ರಾಮಾಂತರ ಪ್ರದೇಶದ ರೋಗಿಗಳಿಗೆ ಹೃದಯದ ಹಾರೈಕೆಯನ್ನು ಕಡಿಮೆ ವೆಚ್ಚದಲ್ಲಿ ಮಾಡಲಾಗುವುದು ಎಂದು ಡಾ. ಶ್ರೀನಿವಾಸ್ ಹಾಗೂ ಡಾ.ರಮೇಶ್ ಹೇಳಿದ್ದಾರೆ.

ವೈವಸ್ ಮೊಬೈಲ್ ಕ್ಯಾತ ಲ್ಯಾಬ್ ಮಂಡ್ಯ, ಹಾಸನ, ತುಮಕೂರು, ಕೋಲಾರ ಮತ್ತು ಕುಣಿಗಲ್‌ಗೆ ಸಂಚರಿಸಲಿದ್ದು, ಮಂಡ್ಯದಲ್ಲಿ ಸ್ಯಾಂಜೋ ಆಸ್ಪತ್ರೆಯಲ್ಲಿ ಜನರಿಗೆ ಚಿಕಿತ್ಸೆ ನೀಡಲಿದೆ ಎಂದು ಶುಕ್ರವಾರ ಗೋಷ್ಠಿಯಲ್ಲಿ ತಿಳಿಸಿದರು.

ವೈವಾಸ್ ಹಾರ್ಟ್ ಸೆಂಟರ್ ಯಶಸ್ವಿನಿ ಯೋಜನೆ ಮತ್ತು ಸಿಜಿಎಚ್‌ಎಸ್‌ನಿಂದ ಮಾನ್ಯತೆ ಪಡೆದಿ ಅನಗತ್ಯವಾಗಿ ಚಿಕಿತ್ಸೆ ಮಾಡಬೇಕಿರುವ ರೋಗಿಗಳಿಗೆ ಆರ್ಥಿಕವಾಗಿ ಹಣಕಾಸಿನ ವ್ಯವಸ್ಥೆ ಮಾಡುವುದಕ್ಕೂ ಪ್ರಯತ್ನ ಮಾಡಲಾಗಿದೆ ಎಂದರು.

ಹೃದಯ ತೊಂದರೆಗಳು ಉಂಟಾದಾಗ ಬೆಂಗಳೂರಿಗೆ ಹೋಗಿ ಸಾವಿರಾರು ರೂ. ಖರ್ಚು ಮಾಡುವುದು ಸಾಮಾನ್ಯ. ಇದನ್ನು ತಪ್ಪಿಸಿ ಗ್ರಾಮೀಣ ಪ್ರದೇಶದ ಜನರಿಗೆ ಕೈಗೆಟಕುವ ದರದಲ್ಲಿ ಹೃದಯ ಚಿಕಿತ್ಸೆ ನೀಡುವುದು ನಮ್ಮ ಧ್ಯೇಯವಾಗಿದೆ ಎಂದರು.

ವೈವಸ್ ಭಾರತದಲ್ಲೇ ಅಗ್ರ ಸಂಸ್ಥೆಯಾಗಿದ್ದು, ಅನುಭವಿ ವೃತ್ತಿಪರರು ಮತ್ತು ಪ್ರಯೋಜಕರಿಂದ ಮೇಲ್ದರ್ಜೆಗೇರಿದೆ, ಎಲ್ಲರಿಗೂ ನಿಲುಕುವ ಗುಣಮಟ್ಟದ ಆರೋಗ್ಯದ ಹಾರೈಕೆ ಸಂಸ್ಥೆಯ ಗುರಿಯಾಗಿದೆ ಎಂದರು.

ಗ್ರಾಮಾಂತರ ಪ್ರದೇಶದ ಜನರು ವೈವಸ್ ಸಂಸ್ಥೆ ಚಿಕಿತ್ಸೆಯನ್ನು ಸದುಪಯೋಗಪಡಿಸಿಕೊಳ್ಳುವಂತೆ ಅವರು ಕೋರಿದರು.

ಹೆಚ್ಚಿನ ವಿವರಗಳಿಗೆ ವೈವಸ್ ಹೆಲ್ತ್ ಸೆಂಟರ್, ನಂ.1140, ಮಮತ ಮೆಡಿಕಲ್ ಬಿಲ್ಡಿಂಗ್, ಮಂಡ್ಯ, ದೂ.ಸಂ.653442ಗೆ ಸಂಪರ್ಕಿಸಬಹು ದಾಗಿದೆ ಎಂದರು.

ಡಾ.ಮಂಜುನಾಥ್ ಇತರರು ಗೋಷ್ಠಿಯಲ್ಲಿ ಹಾಜರಿದ್ದರು.